ದಿನಾಂಕಃ 08-04-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ–** 1 ನೇ ಪ್ರತಿವಾದಿ ಪರ ಶ್ರೀ ಪಿಎಸವೈ ವಕೀಲರಿಂದ

1 ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು. ಆದ್ದರಿಂದ ಅವರ ಪರವಾಗಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟಿ ಸವಾಲುಃ–** 2 ಮತ್ತು 3 ನೇ ಪ್ರತಿವಾದಿಯರ ಪರ ಶ್ರೀ ಎಫಎನಎನ ವಕೀಲರಿಂದ

1 ನೇ ಪ್ರತಿವಾದಿ ಉಡಚಪ್ಪನಿಗೆ ಇಬ್ಬರು ಮಕ್ಕಳು. ಆತನ ಹೆಂಡತಿ ಜೀವಿತ ಇದ್ದಾಳೆ. ದಾವಾ ಆಸ್ತಿ 1 ನೇ ಪ್ರತಿವಾದಿಗೆ ಯಾವ ರೀತಿ ಬಂದಿದೆ ಎಂಬ ಮಾಹಿತಿ ನನಗೆ ಇಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಗೆ ಆತನ ತಂದೆಯಿಂದ ಬಂದಂತಹ ಆಸ್ತಿ ಎಂದರೆ ಸರಿ. ದಾವಾ ಆಸ್ತಿ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಆಗಿದ್ದು ಅದರಲ್ಲಿ 1 ನೇ ಪ್ರತಿವಾದಿ, ಆತನ ಹೆಂಡತಿ ಹಾಗೂ ಮಕ್ಕಳ ನಡುವೆ ಇವತ್ತಿನವರೆಗೂ ವಿಭಾಗ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳು ದಾವಾ ಆಸ್ತಿಯಲ್ಲಿ ವಿಭಾಗ ಕೇಳಿ ಸವಣೂರಿನ ದಿವಾಣಿ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 281/2015 ಎಂದು ದಾವೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ದಾವಾ ಆಸ್ತಿ ನೋಡಿರುವುದಿಲ್ಲ. ದಾವಾ ಆಸ್ತಿಯ ಚಕ್ಕಬಂದಿ ಪೂರ್ವಕ್ಕೆ ಬಾಲಣ್ಣನವರ ಆಸ್ತಿ, ಪಶ್ಚಿಮಕ್ಕೆ ನರಸಮ್ಮನವರ ಆಸ್ತಿ, ಉತ್ತರಕ್ಕೆ ಯಲ್ಲಾಪುರ ಗಡಿ

ಹಾಗೂ ದಕ್ಷಿಣಕ್ಕೆ ಕೋಡೆಪ್ಪನವರ ಆಸ್ತಿ ಇದೆ. ದಾವಾ ಆಸ್ತಿಯ ದೇವಪ್ಪ ಹನುಮಂತಪ್ಪ ಕೋಡೆಪ್ಪನವರ ಜಮೀನು ಇಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನಮ್ಮ ಗ್ರಾಮಸ್ಥನಾಗಿದ್ದು ನಮ್ಮ ಓಣಿಯಲ್ಲಿಯೇ ಆತನ ಮನೆ ಇದೆ ಎಂದರೆ ಸರಿ. 2000 ರಿಂದ 2016 ರವರೆಗೆ 1 ನೇ ಪ್ರತಿವಾದಿಯ ಮನೆಯಲ್ಲಿ ಯಾವುದೇ ಮದುವೆ ಅಥವಾ ಇತರೇ ಕೌಟುಂಬಿಕ ಕಾರ್ಯಕ್ರಮಗಳು ಆಗಿವೆಯೋ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮನೆಯಲ್ಲಿ ಯಾರಾದರೂ ಅನಾರೋಗ್ಯದಿಂದ ಬಳಲುತ್ತಿದ್ದವರು ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ದಾವಾ ಆಸ್ತಿ ನೀರಾವರಿ ಜಮೀನು. ನನಗೆ ಸೇರಿದ ನೀರಾವರಿ ಜಮೀನು ಇದೆ. ನನ್ನ ಜಮೀನಿನಲ್ಲಿ ನಾನು ವರ್ಷಕ್ಕೆ ಎರಡು ವಾಣಿಜ್ಯ ಬೆಳೆ ಬೆಳೆಯುತ್ತೇನೆ ಎಂದರೆ ಸರಿ. ಸದರಿ ಬೆಳೆಯಿಂದ ವಾರ್ಷಿಕ ಎಷ್ಟು ಆದಾಯ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ದುಡಿಮೆ ಮಾಡಿದಷ್ಟು ಬರುತ್ತದೆ ಎಂದು ನುಡಿದಿದ್ದಾರೆ. 1 ಎಕರೆಗೆ ವಾರ್ಷಿಕ ಎಷ್ಟು ಆದಾಯ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು 1 ಎಕರೆಯಲ್ಲಿ ಈ ವರುಷ 20 ಚೀಲ ಗೋವಿನಜೋಳ ಬೆಳೆದಿದ್ದು ಪ್ರತಿ ಕ್ವಿಂಟಾಲ್ ರೂ. 1600/- ಕ್ಕೆ ಮಾರಾಟ ಮಾಡಿದ್ದೇನೆ ಎಂದು ನುಡಿದಿದ್ದಾರೆ. ಇನ್ನೊಂದು ಪೀಕಿನ ಆದಾಯ ಎಷ್ಟು ಎಂದು ಕೇಳಲಾಗಿ ಸಾಕ್ಷಿಯು ಒಂದೇ ಪೀಕು ಬೆಳೆದಿರುವುದು ಎಂದು ನುಡಿದಿದ್ದಾರೆ.

1 ನೇ ಪ್ರತಿವಾದಿ ದಾವಾ ಜಮೀನಿನಲ್ಲಿ ವಾರ್ಷಿಕ ಎರಡು ಬೆಳೆ ಬೆಳೆಯುತ್ತಾನೆ ಎಂದರೆ ಅದು ಅವರಿಗೆ ಬಿಟ್ಟಿದ್ದು ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಾಲು ಮುಂದೂಡಲಾಯಿತು.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)